# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** M/s JSW Renew Energy Limited ರವರಿಗೆ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

**ಓದಲಾಗಿದೆ:** 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/JSWREL-5 MW/(SGWEPL)/Chitradurga/F-20(2021)/2021/1842, ದಿನಾಂಕ:07.06.2021

2) ಸರ್ಕಾರದ ದಿನಾಂಕ:22.07.2021 ರ ಹಂಚಿಕೆ ಸಮಿತಿ ಸಭೆ.

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರ.ಸಂ.(1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s JSW Renew Energy Limited ರವರು ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕಿನ ಚಿಕ್ಕಪ್ಪನಹಳ್ಳಿ, ಮಾದನಾಯಕನಹಳ್ಳಿ, ಸುಲ್ತಾನಿಪುರ ಮತ್ತು ರಾಯನಹಳ್ಳಿ ಗ್ರಾಮಗಳಲ್ಲಿ 5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಘಟಕಕ್ಕೆ ಹಂಚಿಕೆ ನೀಡುವಂತೆ ಕೋರಿ ಹಂಚಿಕೆ ಸಮಿತಿ ಸಭೆಯಲ್ಲಿ ಮಂಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s JSW Renew Energy Limited ರವರು ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕಿನ ಚಿಕ್ಕಪ್ಪನಹಳ್ಳಿ, ಮಾದನಾಯಕನಹಳ್ಳಿ, ಸುಲ್ತಾನಿಪುರ ಮತ್ತು ರಾಯನಹಳ್ಳಿ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನು ಆಗಿದ್ದು, ಈಗಾಗಲೇ M/s Sri Gururaghavendra Wind Energy Private Limited ರವರಿಗೆ ದಿನಾಂಕ:23.01.2019 ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡಲು ಶಿಫಾರಸ್ಸುಗೊಂಡಿರುತ್ತದೆ. ಆದರೆ, ಸದರಿ ಕಂಪನಿಯವರು, ತಾತ್ವಿಕ ಅನುಮೋದನೆಗೆ ಶಿಫಾರಸ್ಸುಗೊಂಡಿರುವ ಪ್ರಸ್ತಾವನೆಯನ್ನು ಕಾರಣಾಂತರಗಳಿಂದ ಹಿಂಪಡೆಯುತ್ತಿರುವುದಾಗಿ ತಿಳಿಸಿದ ಹಿನ್ನಲೆಯಲ್ಲಿ, ಸದರಿ ಪ್ರಸ್ತಾವನೆಯ ಶಿಫಾರಸ್ಸನ್ನು ಹಿಂಪಡೆಯಲು ನಿರ್ಧರಿಸಿರುವುದರಿಂದ ಸದರಿ ಸ್ಥಳವು ಹಂಚಿಕೆಗೆ ಲಭ್ಯವಿರುತ್ತದೆ.

MD KREDL

ಸದರಿಯವರು ಯೋಜನಾ ಸ್ಥಳದ ಒಟ್ಟು ವಿಸ್ತೀರ್ಣಕ್ಕೆ ಅಕ್ಷಾಂಶ ಮತ್ತು ರೇಖಾಂಶಗಳನ್ನೂ ನೀಡಿರುತ್ತಾರೆ. ಸದರಿಯವರು 500 ಕಿ.ವ್ಯಾ ಸಾಮರ್ಥ್ಯದ 10 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಸದರಿಯವರು ಅಳವಡಿಸುವ ಪ್ರತಿ ಟರ್ಬೈನ footprint ಜಾಗಕ್ಕೆ 4 ಎಕರೆಗಳಂತೆ ಒಟ್ಟು 40 ಎಕರೆ (4x10=40) ಜಮೀನನ್ನು ಉಪಯೋಗಿಸಬಹುದಾಗಿರುತ್ತದೆ. ಆದ ಕಾರಣ ಯೋಜನೆಗೆ ಅಭಿವೃದ್ಧಿದಾರರು ಸಲ್ಲಿಸಿರುವ ಯೋಜನಾ ವಿಸ್ತೀರ್ಣದಲ್ಲಿ 40 ಎಕರೆ ಜಮೀನನ್ನು ಮಾತ್ರ ಹಂಚಿಕೆ ಸಮಿತಿಯು ಅನುಮೋದಿಸಿದ್ದು, ಸದರಿಯವರ 5 ಮೆ.ವ್ಯಾ ಸಾಮರ್ಥ್ಯವನ್ನು ISTS ವರ್ಗದಡಿಯಲ್ಲಿ ಹಂಚಿಕೆ ಮಾಡಬಹುದಾಗಿದೆ. ಯೋಜನೆಗೆ ಬೇಕಾಗುವ 40 ಎಕರೆ ಖಾಸಗಿ ಜಮೀನನ್ನು ಪಡೆಯುವುದು ಮತ್ತು PGCIL ನಿಂದ Evacuation ನಿರಾಕ್ಷೇಪಣಾ ಪತ್ರ ಹಾಗೂ LTA approval ಪಡೆಯುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ. ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ನ ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಷರತ್ತಿಗೊಳಪಟ್ಟು M/s JSW Renew Energy Limited ರವರಿಗೆ 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ISTS ವರ್ಗದಡಿಯಲ್ಲಿ ಹಂಚಿಕೆಗೆ ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.

GM (Tech) KREDL

Wind Section
No. 1387
Date 16/9/21
Sig ..................

...2

## Geographical area description for 5 MW capacity Wind Power Project of M/s JSW Renew Energy Limited

| Sl. No. | Topo sheet No. | Proposed capacity in MW | Near by villages of the proposed area and district. | Geographical area description of the project |
|---|---|---|---|---|
| 1 | 57 B/7 | 05 MW (10 Nos x 500 kW) | Chikkappanahalli, Madanayakanahalli, Sulthanipura and Rayanahalli villages of Chitradurga taluks of Chitradurga district. | The identified area is covered by Private Land and the proposed area is surrounded by the points A - B - C-D – E - F- G – H – I – J – K – L –M-N-O-P-A and are held in the following Geographical co-ordinates as:<br>**Point A**: Lat: 14°17′31.09″N Long: 76°20′45.63″E<br>**Point B:** Lat: 14°21′50.97″N Long: 76°20′27.49″E<br>**Point C:** Lat: 14°22′44.97″N Long: 76°22′9.98″E<br>**Point D:** Lat: 14°21′52.77″N Long: 76°22′78.80″E<br>**Point E:** Lat: 14°21′58.64″N Long: 76°22′58.18″E<br>**Point F:** Lat: 14°21′20.84″N Long: 76°23′6.46″E<br>**Point G:** Lat: 14°21′14.90″N Long: 76°22′13.62″E<br>**Point H:** Lat: 14°20′6.5″N Long: 76°22′23.52″E<br>**Point I:** Lat: 14°20′7″N Long: 76°23′38.07″E<br>**Point J:** Lat: 14°18′59.00″N Long: 76°23′40.38″E<br>**Point K:** Lat: 14°19′1.52″N Long: 76°22′58.08″E<br>**Point L:** Lat: 14°19′32.84″N Long: 76°22′22.98″E<br>**Point M:** Lat: 14°19′33.06″N Long: 76°21′42.94″E<br>**Point N:** Lat: 14°18′46.8″N Long: 76°21′45.79″E<br>**Point O:** Lat: 14°18′35.38″N Long: 76°22′26.76″E<br>**Point P:** Lat: 14°17′33.39″N Long: 76°22′28.27″E<br>**Peaks:** 662, 678, 691, 731 and 757 m AMSL |
| | Total | 5 MW | | |

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 133 ಎನ್‌ಸಿಇ 2021</u>**
**<u>ಬೆಂಗಳೂರು, ದಿನಾಂಕ:13/09/2021</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s JSW Renew Energy Limited ರವರಿಗೆ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕಿನ ಚಿಕ್ಕಪ್ಪನಹಳ್ಳಿ, ಮಾದನಾಯಕನಹಳ್ಳಿ, ಸುಲ್ತಾನಿಪುರ ಮತ್ತು ರಾಯನಹಳ್ಳಿ ಗ್ರಾಮಗಳಲ್ಲಿ 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಷರತ್ತು ಹಾಗೂ ಶೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಿ ಆದೇಶಿಸಿದೆ.